Geetha Shishu Shikshana Sangha (R)

**SIMHA SUBBAMAHALAKSHMI FIRST GRADE COLLEGE**

**KRS ROAD, MYSURU-570 016**

# ಯಶಸ್

# YASHAS

**Volume – 1 Issue No. – 4** A SSFGC weekly newsletter **22nd June 2019**

## ಅಂತರಾಷ್ಟ್ರೀಯ ಯೋಗ ದಿನಾಚರಣೆ



21 ಜೂನ್ 2019 ರಂದು ಮೈಸೂರಿನ ಆಕರ್ಷಣೀಯ ನೈಸರ್ಗಿಕ ತಾಣವಾದ ಚಾಮುಂಡಿ ಬೆಟ್ಟದ ತಪ್ಪಲಿನ ರೇಸ್ ಕೋರ್ಸ್ ಆವರಣದಲ್ಲಿ ಬೆಳಗ್ಗೆ 6 ರಿಂದ 8 ಗಂಟೆಯವರಿಗೆ ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಭಾಗವಾಗಿ ನಡೆದ ಯೋಗ ಪ್ರದರ್ಶನದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರುಗಳು ಭಾಗವಹಿಸಿದರು.

ಅಂತರಾಷ್ಟ್ರೀಯ ಯೋಗ ದಿನದ ಅಂಗವಾಗಿ ಜಿಲ್ಲಾಡಳಿತ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ಸುಮಾರು 55 ಸಾವಿರಕ್ಕೂ ಹೆಚ್ಚು ಮಂದಿ ಯೋಗ ಪ್ರದರ್ಶನ ಮಾಡಿದರು. ಇದರಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಯೋಗಪ್ರದರ್ಶನ ಮಾಡಿದ್ದರ ಜೊತೆಗೆ ಸ್ವಯಂಸೇವಕರಾಗಿ ಕೂಡ ಭಾಗವಹಿಸಿದ್ದರು.




ಯೋಗ ಪ್ರದರ್ಶನವನ್ನು ಡೊಳ್ಳು ಬಾರಿಸುವ ಮೂಲಕ ಸಚಿವರಾದ ಶ್ರೀ ಜಿ. ಟಿ. ದೇವೇಗೌಡರವರು, ಶ್ರೀ ಸಾ. ರಾ. ಮಹೇಶ್ ಮತ್ತು ಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿಜಿಗಳವರು ಚಾಲನೆ ನೀಡಿದರು. ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ

ದೇಶಿಕೇಂದ್ರ ಮಹಾಸ್ವಾಮಿಗಳು, ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮಿಜಿ, ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಜಿ, ಶಾಸಕರಾದ ಎಸ್. ಎ. ರಾಮದಾಸ್, ಎಲ್, ನಾಗೇಂದ್ರ, ಡಾ. ಯತೀಂದ್ರ ಸಿದ್ಧರಾಮಯ್ಯ, ಜಿಲ್ಲಾಧಿಕಾರಿಗಳಾದ ಅಭಿರಾಮ್ ಜಿ. ಶಂಕರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.



ಬೆಳಗ್ಗೆ 5.30 ರಿಂದಲೇ ಯೋಗಪಟುಗಳು ಯೋಗ ಮ್ಯಾಟನೊಂದಿಗೆ, ಬಿಳಿ ಉಡುಪು ಧರಿಸಿ ಬರುತ್ತಿದ್ದರು. ಐದು ವರ್ಷದ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಯೋಗ ಪ್ರದರ್ಶನ ಮಾಡಿದರು. ಇದು ನನಗೆ ಆಶ್ಚರ್ಯವೆನಿಸಿತು. ಈ ಮೂಲಕ ಯೋಗದ ಬಗ್ಗೆ ಮತ್ತಷ್ಟು ತಿಳಿದುಕೊಳ್ಳುವ ಆಸಕ್ತಿ ನನಗೆ ಬಂದಿತು.

**– ಸೂರಜ್ ಪಾಲ್ ಸಿಂಗ್. ಸಿ (ತೃತೀಯ ಬಿ.ಕಾಂ ವಿದ್ಯಾರ್ಥಿ)**



ಯೋಗ ಪ್ರದರ್ಶನದ ನಂತರ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ನಮ್ಮ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಸಂತೋಷದಿಂದ ಮಾಡಿದೆವು. ನಮ್ಮ ಪರಿಸರವೆಲ್ಲವನ್ನು ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

**– ಸ್ವಾತಿ. ಎಸ್. (ದ್ವಿತೀಯ ಬಿ. ಕಾಂ. ವಿದ್ಯಾರ್ಥಿನಿ)**


## ಯೋಗ ತಾಲೀಮು





ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಭಾಗವಾಗಿ ದಿನಾಂಕ 18, 19 ಮತ್ತು 20 ಜೂನ್ 2019 ರಂದು ಕಾಲೇಜಿನಲ್ಲಿ ಜಿಎಸ್ಎಸ್ ಯೋಗ ಸಂಸ್ಥೆಯಿಂದ ಶ್ರೀಮತಿ ಉಮಾ ಪ್ರಭು ಮತ್ತು ಶ್ರೀಮತಿ ದೇವಿಕಾ ಅವರು ವಿದ್ಯಾರ್ಥಿಗಳಿಗೆ ಯೋಗ ತರಬೇತಿಯನ್ನು ನೀಡಿದರು. ತರಬೇತಿಯ ಜೊತೆ ಜೊತೆಯಲ್ಲಿಯೆ ಯೋಗಾಸನಗಳ ವಿಶೇಷತೆ ಮತ್ತು ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗಾಭ್ಯಸವನ್ನು ಮುಂದುವರಿಸಿ ಎಂದು ಸಲಹೆ ನೀಡಿದರು.

# ರಾಷ್ಟ್ರೀಯ ಸೇವಾ ಯೋಜನೆ







ದಿನಾಂಕ 20 ಜೂನ್ 2019 ರಂದು ಕಾಲೇಜಿನ ಮುಂಭಾಗದ ರಸ್ತೆಯಲ್ಲಿರುವ ಪಾದಚಾರಿ ಮಾರ್ಗದಲ್ಲಿ ತೆರೆದುಕೊಂಡಿದ್ದ ಗುಂಡಿಯೊಂದನ್ನು ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಮತ್ತು ಇತರ ವಿದ್ಯಾರ್ಥಿಗಳಾದ ಶ್ರೀ ಸೂರಜ್ ಪಾಲ್ ಸಿಂಗ್. ಸಿ, ದರ್ಶನ್. ಎಂ ಮತ್ತು ಯೋಗೇಶ್. ಎಂ. ಆರ್ ಅವರು ಸಮತಟ್ಟಾದ ಕಲ್ಲುಗಳಿಂದ ಮುಚ್ಚಿ ಮುಂದಿನ ದಿನಗಳಲ್ಲಿ ಯಾವುದೇ ಅನಾಹುತವಾಗದ ಹಾಗೆ ಮಾಡಿ ಆ ಮಾರ್ಗದಲ್ಲಿ ನಡೆಯುವ ಪಾದಚಾರಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವರನ್ನು ಕಾಲೇಜಿನ ದೈನಂದಿನ ಸಮಾವೇಶ, To Gather ನಲ್ಲಿ ಅಭಿನಂದಿಸಲಾಯಿತು.




18 ಜೂನ್ 2019 ರಂದು ಜಿಎಸ್ಎಸ್ಎಸ್‌ನ ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ. ಪಂಡಿತ್ ಅವರು ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ಕೇಳಿ ಅವರೊಂದಿಗೆ ಸಂವಾದದಲ್ಲಿ ಪಾಲ್ಗೊಂಡ ಚಿತ್ರಗಳು.



19 ಜೂನ್ 2019 ರಂದು ಜಿಎಸ್ಎಸ್ಎಸ್‌ನ ಕಾರ್ಯದರ್ಶಿಗಳಾದ ಶ್ರೀಮತಿ ವನಜಾ ಬಿ. ಪಂಡಿತ್ ಮತ್ತು ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ. ಪಂಡಿತ್ ಅವರೊಂದಿಗೆ ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ ಕೆ. ವಿ, ಪ್ರೊ. ಚಂದ್ರಶೇಖರ್ ಮತ್ತು ಪ್ರೊ. ವಿಶ್ವನಾಥ್ ಅವರು ಶೈಕ್ಷಣಿಕ ಕಾರ್ಯಚಟುವಟಿಕೆಗಳ ಕುರಿತು ಚರ್ಚೆ ಮಾಡುತ್ತಿರುವುದು.




19 ಜೂನ್ 2019 ರಂದು ಪ್ರೊ. ವಿಶ್ವನಾಥ್ ಅವರನ್ನು ಬಿ. ಕಾಂ ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವ ಚಿತ್ರಗಳು. ಪ್ರೊ. ವಿಶ್ವನಾಥ್ ಅವರು ಮೊದಲ ವರ್ಷದ ಬಿ.ಬಿ.ಎ ವಿದ್ಯಾರ್ಥಿಗಳಿಗೆ ಮತ್ತು ಮೂರನೆಯ ವರ್ಷದ ಬಿ.ಕಾಂ ವಿದ್ಯಾರ್ಥಿಗಳಿಗೆ Accounting ಮತ್ತು Cost Accounting ವಿಷಯಗಳನ್ನು ಬೋಧನೆ ಮಾಡುತ್ತಾರೆ. ಶ್ರೀಯುತರು Accounting ವಿಷಯದಲ್ಲಿ ಭೀಷ್ಮರೆಂದೆ ಖ್ಯಾತರು.

# ವಿದ್ಯಾರ್ಥಿ ನಾಯಕತ್ವ ಕಾರ್ಯಾಗಾರ: ವಿದ್ಯಾರ್ಥಿ ಸಂಸತ್ತಿನ ಆಯ್ಕೆ





ವಿದ್ಯಾರ್ಥಿಗಳಲ್ಲಿ ಉತ್ತಮ ನಾಯಕತ್ವದ ಗುಣವನ್ನು ಬೆಳಸಬೇಕು ಮತ್ತು ಅವರನ್ನು ಉತ್ತಮ ನಾಯಕರನ್ನಾಗಿ ರೂಪಿಸಬೇಕೆಂಬ ಯೋಜನೆಯ ಭಾಗವಾಗಿ The Forum ನಲ್ಲಿ, 20 ಜೂನ್ 2019 ರಂದು ವಿದ್ಯಾರ್ಥಿ ನಾಯಕತ್ವವನ್ನು ಆಯ್ಕೆ ಮಾಡಲಾಯಿತು. ಸರ್ವ ವಿದ್ಯಾರ್ಥಿಗಳನ್ನು ನಾಯಕರ ಆಯ್ಕೆ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳುವಂತೆ ಮಾಡುವುದು ಈ ನಾಯಕತ್ವ ಮಾದರಿಯ ವೈಶಿಷ್ಟ್ಯ. ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳು ಮುಂದಿನ ಸ್ತರದ ಗುಂಪುಗಳು, ಮುಂದೆ ತರಗತಿ, ಅನಂತರ ಕಾಲೇಜು – ಈ ಪ್ರತಿ ಹಂತದಲ್ಲಿಯೂ ಪ್ರತಿನಿಧಿಗಳ ಆಯ್ಕೆ ನಡೆದು ಕೊನೆಯ ಹಂತದಲ್ಲಿ ಒಬ್ಬ ವಿದ್ಯಾರ್ಥಿ ಪ್ರಮುಖ ಮತ್ತು ಇಬ್ಬರು ಉಪ ವಿದ್ಯಾರ್ಥಿ ಪ್ರಮುಖರು ಈ ಪ್ರಕ್ರಿಯೆಯಲ್ಲಿ ಆಯ್ಕೆಯಾದರು. ಪ್ರತಿ ತಿಂಗಳೂ ಪುನರಾವರ್ತನೆಯಾಗುವ ಈ ಪ್ರಕ್ರಿಯೆ, ಪ್ರತಿಯೊಬ್ಬ ನಾಯಕತ್ವದ ಆಕಾಂಕ್ಷಿಗೂ ಅಪರಿಮಿತ ಸಾಧ್ಯತೆಗಳನ್ನು ಒದಿಗುಸುತ್ತದೆ.




ಜೂನ್ ತಿಂಗಳ ವಿದ್ಯಾರ್ಥಿ ಪ್ರಮುಖನಾಗಿ ತೃತೀಯ ಬಿ. ಕಾಂ ವಿದ್ಯಾರ್ಥಿ ಮೊಹಮದ್ ಉಮರ್; ಉಪ ಪ್ರಮುಖರಾಗಿ ತೃತೀಯ ಬಿ.ಕಾಂ ವಿದ್ಯಾರ್ಥಿ ಲಿಖಿತ್ ಬಾಬು ಮತ್ತು ದ್ವಿತೀಯ ಬಿ. ಕಾಂ ವಿದ್ಯಾರ್ಥಿ ವರ್ಷ ಅವರು ಆಯ್ಕೆಯಾದರು. ನಿರ್ದೇಶಕರಾದ ಡಾ. ಪ್ರಭಾಕರ. ಕೆ. ವಿ ಅವರು ತಾವು ಅಭಿವೃದ್ಧಿ ಪಡಿಸಿರುವ ಈ ಮಾದರಿಯ ಪರಿಚಯವನ್ನು ಮೊದಲಿಗೆ ಮಾಡಿಕೊಟ್ಟು, ನಂತರ ಅದನ್ನು ಅನುಷ್ಠಾನಗೊಳಿಸುವ ಕಾರ್ಯವನ್ನು ನಡೆಸಿಕೊಟ್ಟರು. ಈ ಚಟುವಟಿಕೆಯ ಕೊನೆಯ ಭಾಗದಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳನ್ನು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೆಲ್ಲರು ಅಭಿನಂದಿಸಿದರು.

To Gather ನಲ್ಲಿ 22 ಜೂನ್ 2019 ರಂದು ಕಾಲೇಜಿನ ವಾರದ ವಾರ್ತಾ ಪತ್ರಿಕೆಯಾದ 'ಯಶಸ್' ಪತ್ರಿಕೆಯ ಎರಡನೆಯ ಮತ್ತು ಮೂರನೆಯ ಸಂಚಿಕೆಯನ್ನು ನಿರ್ದೇಶಕರು, ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬಿಡುಗಡೆ ಮಾಡಿದರು.



**ಕನ್ನಡ ವರದಿಗಾರರು**
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ

**ಛಾಯಾಚಿತ್ರ ಕೃಪೆ**
ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಕು. ಪ್ರಿಯಾಂಕ. ಎಂ. ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ